ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

ಮಂಗಳೂರಿನ ಕಾರ್ಮಿಕ ಭವನ ನಿರ್ಮಾಣದ ಬಗ್ಗೆ

ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-

962 (1174) ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರಿನ ಕಾರ್ಮಿಕ ಭವನ ನಿರ್ಮಾಣಗೊಂಡು ವರ್ಷಗಳು ಕಳೆದರೂ, ಅದರಲ್ಲಿ ಕಛೇರಿ ಪ್ರಾರಂಭ ಮಾಡದಿರಲು ಕಾರಣವೇನು; (ವಿವರ ನೀಡುವುದು)

(ಆ) ಮಂಗಳೂರಿನ ಕಾರ್ಮಿಕ ಭವನಕ್ಕೆ ಕಳೆದ ಒಂದು ವರ್ಷದಿಂದ ಎಷ್ಟು ಬಾಡಿಗೆಯನ್ನು ಪಾವತಿಸಲಾಗಿದೆ ; ಸರ್ಕಾರಕ್ಕೆ ಉಂಟಾದ ನಷ್ಟವನ್ನು ಭರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ;

(ಇ) ಕಾರ್ಮಿಕ ಹಿತರಕ್ಷಣೆಗೆ ಇಲಾಖೆಯಲ್ಲಿ ಯೋಜನೆಗಳನ್ನು ಮುಟ್ಟಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ಕಾರ್ಮಿಕ ಇಲಾಖೆಯಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಹೆಚ್ಚುವರಿ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ? (ವಿವರ ನೀಡುವುದು)